# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : **335**

ಸದಸ್ಯರ ಹೆಸರು : **ಡಾ: ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

ಉತ್ತರಿಸುವ ದಿನಾಂಕಃ : **11-12-2024**

ಉತ್ತರಿಸುವ ಸಚಿವರು: : **ಲೋಕೋಪಯೋಗಿ ಸಚಿವರು**

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿಯ ಬಳದರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಳದರೆ ಗ್ರಾಮದ ಸರ್ವೆ ನಂ.260ರಲ್ಲಿ 2 ಎಕರೆ 20 ಗುಂಟೆ ಪ್ರದೇಶದ ಸ್ಥಳದಲ್ಲಿ ವಾಣಿಜ್ಯ ಅಕ್ರಮ ಕಟ್ಟಡವನ್ನು ತೆರವುಗೊಳಿಸಲು ಲೋಕೋಪಯೋಗಿ ಇಲಾಖೆ ಹಾಸನದವರಿಗೆ ಗ್ರಾಮ ಪಂಚಾಯತ್ ಬಳದರೆಯ ಪಿ.ಡಿ.ಓ. ರವರು ಪತ್ರ ಬರೆದಿದ್ದು, ಅದರಂತೆ ಈವರೆಗೆ ಕ್ರಮವಹಿಸಿರುವ ಬಗ್ಗೆ ಸಂಪೂರ್ಣ ವಿವರ ನೀಡುವುದು: | ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ಬಳದರೆ ಗ್ರಾಮದ ಸರ್ವೆ ನಂಬರ್ 260ರಲ್ಲಿ 2 ಎಕರೆ 20 ಗುಂಟೆ ಪ್ರದೇಶದ ಸ್ಥಳದಲ್ಲಿ ವಾಣಿಜ್ಯ ಅಕ್ರಮ ಕಟ್ಟಡವನ್ನು ತೆರವುಗೊಳಿಸುವ ಕುರಿತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಪವಿಭಾಗ ಚನ್ನರಾಯಪಟ್ಟಣ ರವರು ಗ್ರಾಮ ಪಂಚಾಯತ್ ಬಳದರೆಯ ಪಿ.ಡಿ.ಓ. ರವರಿಗೆ ದಿನಾಂಕ: 15.11.2023 ರಂದು ಪತ್ರ ಬರೆದು, ಬಳದರೆ ಗ್ರಾಮ ಪಂಚಾಯಿತಿ ಕಾರ್ಯಾಲಯದಿಂದ ದಿನಾಂಕ:31.03.2023 ರಂದು ಶ್ರೀ ನವೀನ್ ಶಾಂತರಾಮಶೆಟ್ಟಿ ಬಿನ್ ಶಾಂತರಾಮಶೆಟ್ಟಿ ರವರ ಅರ್ಜಿ ದಿನಾಂಕ:30.12.2022ರ ಮೇರೆಗೆ ಬರ್ಗರ್‌ಕಿಂಗ್ ಕಟ್ಟಡ ನಿರ್ಮಾಣ ಮಾಡಲು ನಿಗದಿತ ಪರವಾನಿಗೆ ಶುಲ್ಕ ರೂ.6000.00 ಗಳನ್ನು ಪಾವತಿ ಮಾಡಿಸಿಕೊಂಡು ರೆಸ್ಟೋರೆಂಟ್ ಬ್ರಾಂಡ್ಸ್ ಏಷಿಯಾ ಲಿಮಿಟೆಡ್ (ಬರ್ಗರ್‌ಕಿಂಗ್) ಕಟ್ಟಡವನ್ನು ಬಳದರೆ ಗೇಟ್, ಎನ್.ಹೆಚ್-75 ಉದಯಪುರ ಎಂದು ವಿಳಾಸ ನಮೂದಿಸಿ ಪರವಾನಿಗೆಯನ್ನು ನೀಡಿದ ನಂತರ, ಸದರಿ ಜಾಗವು ಅನ್ಯಸಂಕ್ರಮಣವಾಗಿ ಭೂಪರಿವರ್ತನೆಯಾಗಿ ಏಕನಿವೇಶನ ನಕಾಶೆ ಅನುಮೋದನೆಯಾಗುವ ಮೊದಲೇ ಕಟ್ಟಡ ಪರವಾನಿಗೆ ನೀಡಿರುವುದು ಕಂಡು ಬಂದಿರುತ್ತದೆ. ಲೋಕೋಪಯೋಗಿ ಇಲಾಖೆಯ ಜಿಲ್ಲಾಮುಖ್ಯ ರಸ್ತೆಯ ಪಕ್ಕದಲ್ಲಿ ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ನೀಡುವ ಮೊದಲು ಲೋಕೋಪಯೋಗಿ ಇಲಾಖೆಯ ಹೆದ್ದಾರಿ ಪ್ರಾಧಿಕಾರದಿಂದ ನಿರಾಕ್ಷೇಪಣೆ ಪತ್ರವನ್ನು ಪಡೆಯದೆ ಪರವಾನಿಗೆಯನ್ನು ನೀಡಿ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ನಿಯಮಾವಳಿಗಳ ರೀತ್ಯಾ ನಿಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡವು ಅಕ್ರಮವಾಗಿ ತಲೆ ಎತ್ತಿದ್ದಲ್ಲಿ ತೆರವುಗೊಳಿಸುವುದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುತ್ತದೆ ಎಂದು ಸದರಿ ಪತ್ರದಲ್ಲಿ ತಿಳಿಸಲಾಗಿರುತ್ತದೆ (ಅನುಬಂಧ-1).<br>ಮುಂದುವರೆದು, ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಹಾಸನ ರವರು |

| | | |
|---|---|---|
| | | ಕೂಡ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಳದರೆ ಗ್ರಾಮಪಂಚಾಯಿತಿ, ಚನ್ನರಾಯಪಟ್ಟಣ ತಾಲ್ಲೂಕು ರವರಿಗೆ ದಿನಾಂಕ:06.12.2023 ರಂದು ಬರೆದಿರುವ ಪತ್ರದಲ್ಲಿ, ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಬಳದರೆ ಗ್ರಾಮದ ಸ.ನಂ.260ರಲ್ಲಿ ನಿರ್ಮಿಸಲಾದ ಬರ್ಗರ್ ಕಿಂಗ್ ಅಂಗಡಿ/ಇತರೆ ವಾಣಿಜ್ಯ ಮಳಿಗೆಗಳು ಬಳದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವುದರಿಂದ ನಿಯಮಾವಳಿಗಳ ಉಲ್ಲಂಘನೆಯಾಗಿರುವ ಕಟ್ಟಡದ ಜಾಗವನ್ನು/ಭಾಗವನ್ನು ತೆರವುಗೊಳಿಸಲು ಬಳದರೆ ಗ್ರಾಮ ಪಂಚಾಯಿತಿಯ ಕಾರ್ಯ ವ್ಯಾಪ್ತಿಯಲ್ಲಿ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ (ಅನುಬಂಧ-2). |
| ಅ) | ಹಾಸನ ಜಿಲ್ಲೆಯ ಗ್ರಾಮಾಂತರ ಯೋಜನಾ ಪ್ರಾಧಿಕಾರದ ಸಹಾಯಕ ನಿರ್ದೇಶಕರು ದಿನಾಂಕ:30.05.2023 ರಲ್ಲಿ ಈ ಜಮೀನಿಗೆ ವಾಣಿಜ್ಯ ಉದ್ಯಮಕ್ಕೆ ತಾಂತ್ರಿಕ ಅನುಮೋದನೆ ನೀಡುವ ಸಂದರ್ಭದಲ್ಲಿ ಕ್ರಮ ಸಂಖ್ಯೆ:22ರಲ್ಲಿ ಪ್ರಸ್ತಾಪಿತ ಜಮೀನಿನಲ್ಲಿ ಈಗಾಗಲೇ ಭೂ-ಪರಿವರ್ತನೆ ಮುಂಚಿತವಾಗಿ ನಿರ್ಮಿಸಿದ ಹಾಲಿ ಕಟ್ಟಡವಿದ್ದು, ರಸ್ತೆ ನಿಯಮಗಳನ್ವಯ ರಸ್ತೆ ಮಾರ್ಜಿನ್ ಹಾಗೂ ಕಟ್ಟಡ ರೇಖೆಗಳ ಜಾಗದಲ್ಲಿ ಕಟ್ಟಡವಿದ್ದು ರಸ್ತೆ ಮಾರ್ಜಿನ್ ಮತ್ತು ಕಟ್ಟಡ ರೇಖೆಯಲ್ಲಿ ನಿರ್ಮಾಣ ಮಾಡಿರುವ ಕಟ್ಟಡವನ್ನು ತೆರವುಗೊಳಿಸತಕ್ಕದ್ದು ಎಂದು ಆದೇಶಿಸಿದ್ದು ಅದರ ಬಗ್ಗೆ ವಹಿಸಿರುವ ಕ್ರಮವೇನು? (ಸಂಪೂರ್ಣ ವಿವರ ನೀಡುವುದು) | ವಾಣಿಜ್ಯ (ಹೋಟೇಲ್) ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯನ್ನು ತಯಾರಿಸಿ ಅನುಮೋದನೆ ನೀಡುವ ಮೊದಲು ಲೋಕೋಪಯೋಗಿ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯದೆ ತಾಂತ್ರಿಕ ಅನುಮೋದನೆಯನ್ನು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಹಾಸನ ರವರು ನೀಡಿದ್ದು, ಈ ಸಲುವಾಗಿ ಸದರಿ ಕಟ್ಟಡವನ್ನು ತೆರವುಗೊಳಿಸುವ ಸಂಬಂಧ ಸದರಿ ಇಲಾಖೆ ವತಿಯಿಂದಲೇ ಸೂಕ್ತ ಕ್ರಮ ಕೈಗೊಂಡು ಒತ್ತುವರಿ ಮುಕ್ತ ರಸ್ತೆಯನ್ನಾಗಿರಿಸಿ ಕೊಡಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಪವಿಭಾಗ ಚನ್ನರಾಯಪಟ್ಟಣ ರವರು ದಿನಾಂಕ:23.11.2023 ರಲ್ಲಿ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಹಾಸನ ರವರಿಗೆ ಪತ್ರ ಬರೆದಿರುತ್ತಾರೆ (ಅನುಬಂಧ-3).<br><br>ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿಯ ಬಳದರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಳದರೆ ಗ್ರಾಮದ ಸರ್ವೆ ನಂ.260ರಲ್ಲಿ 2 ಎಕರೆ 20 ಗುಂಟೆ ಪ್ರದೇಶದ ಸ್ಥಳದಲ್ಲಿ ಅಕ್ರಮ ವಾಣಿಜ್ಯ ಕಟ್ಟಡವನ್ನು ತೆರವುಗೊಳಿಸುವ ಪ್ರಕ್ರಿಯೆಯು ಗ್ರಾಮಪಂಚಾಯತ್ ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಹಾಸನ ರವರ ವ್ಯಾಪ್ತಿಗೆ ಸಂಬಂಧಿಸಿದ್ದು, ಈ ಕುರಿತು ಲೋಕೋಪಯೋಗಿ ಇಲಾಖೆಯಿಂದ ಕಟ್ಟಡವನ್ನು ತೆರವುಗೊಳಿಸುವಂತೆ ಕೋರಿ ಎರಡೂ ಪ್ರಾಧಿಕಾರಗಳಿಗೆ ಪತ್ರ ಬರೆಯಲಾಗಿರುತ್ತದೆ. |

ಲೋಇ 57 ಸಿಕ್ಯೂಎನ್ 2024(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಅನುಬಂಧ-1 (LC No 335)

(7)

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ,
ಚನ್ನರಾಯಪಟ್ಟಣ -573116

Tell #: 08176-252224
Email ID:pwdaee2crp@gmail.com

ಕ್ರ.ಸಂ/ಸ.ಕಾ.ಇಂ/ನಂ.2,ಲೋ.ಇ.ಉ.ವಿ/ಚ.ರಾ.ಪ/2023-24/ 958 ದಿನಾಂಕ:- 15-11-2023

ರವರಿಗೆ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಗ್ರಾಮ ಪಂಚಾಯಿತಿ ಬಳದರೆ,
ಚನ್ನರಾಯಪಟ್ಟಣ ತಾ॥

ಮಾನ್ಯರೇ,

ವಿಷಯ:- ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ಬಳದರೆ ಗ್ರಾಮದ ಸ.ನಂ.260ರಲ್ಲಿ ನಿರ್ಮಿಸಲಾದ ಬರ್ಗರ್ ಕಿಂಗ್ ಅಂಗಡಿ/ಇತರೆ ವಾಣಿಜ್ಯ ಮಳಿಗೆಯ ಬಗ್ಗೆ

ಉಲ್ಲೇಖ:- 1)ಈ ಕಛೇರಿ ಪತ್ರ ಸಂಖ್ಯೆ:ಸಕಾಇಂ:ಲೋಇಉವಿ:ಚರಾಪ:2023-24/551-52 ದಿನಾಂಕ:-25.08.2023
2)ಈ ಕಛೇರಿ ಪತ್ರ ಸಂಖ್ಯೆ:ಸಕಾಇಂ:ಲೋಇಉವಿ:ಚರಾಪ:2023-24/651-56 ದಿನಾಂಕ:-11.09.2023
3)ತಮ್ಮ ಕಛೇರಿ ಪತ್ರ ಸಂಖ್ಯೆ:ಗ್ರಾ.ಪಂ/ಬ/21/2023-24/ ದಿನಾಂಕ:-19.09.2023

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೋಕು ದಂಡಿಗನಹಳ್ಳಿ ಹೋಬಳಿ ಬಳದರೆ ಗ್ರಾಮದ ಸರ್ವೆ ನಂಬರ್ 260ರಲ್ಲಿ ನಿರ್ಮಿಸಲಾದ ಬರ್ಗರ್ ಕಿಂಗ್ ಅಂಗಡಿ/ಇತರೆ ಅಂಗಡಿ ಮಳಿಗೆಗಳು ಜಿಲ್ಲಾಮುಖ್ಯ ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಿರುವ ಬರ್ಗರ್ ಕಿಂಗ್ ಅಂಗಡಿ/ಇತರೆ ಅಂಗಡಿ ಮಳಿಗೆಗಳನ್ನು ನಿರ್ಮಾಣ ಮಾಡಲು ಕಟ್ಟಡ ಪರವಾನಗಿ ಮತ್ತು ವಿದ್ಯುತ್ ಸಂಪರ್ಕಕ್ಕೆ ಅನುಮತಿ ನೀಡಲಾಗಿದೆಯೇ? ನೀಡಿದ್ದಲ್ಲಿ ಸದರಿ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಈ ಉಪವಿಭಾಗ ಕಛೇರಿಗೆ ಸಲ್ಲಿಸಲು ಉಲ್ಲೇಖ (1) ಮತ್ತು (2)ರ ಪತ್ರಗಳಲ್ಲಿ ಕೋರಲಾಗಿತ್ತು. ಅದರ ಅನ್ವಯ ನೀವು ಉಲ್ಲೇಖ (3)ರ ಪತ್ರದಲ್ಲಿ ಸದರಿ ಕಟ್ಟಡ ನಿರ್ಮಾಣದ ಬಗ್ಗೆ ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಯಾವುದೇ ಅನುಮತಿ ನೀಡಿರುವುದು ಕಂಡು ಬಂದಿರುವುದಿಲ್ಲ ಎಂದು ಹಿಂಬರಹ ನೀಡಿರುತ್ತೀರಿ.

ಆದರೆ ಲಭ್ಯವಿರುವ ದಾಖಲಾತಿಗಳ ಪ್ರಕಾರ ನಿಮ್ಮ ಪಂಚಾಯಿತಿ ಕಾರ್ಯಾಲಯದಿಂದ ದಿನಾಂಕ:31.03.2023 ರಂದು ಶ್ರೀ ನವೀನ್ ಶಾಂತರಾಮಶೆಟ್ಟಿ ಬಿನ್ ಶಾಂತರಾಮಶೆಟ್ಟಿ ರವರ ಅರ್ಜಿ ದಿನಾಂಕ:30.12.2022ರ ಮೇರೆಗೆ ವಿವಾದಿತ ಬರ್ಗರ್‌ಕಿಂಗ್ ಕಟ್ಟಡ ನಿರ್ಮಾಣ ಮಾಡಲು ನಿಗದಿತ ಪರವಾನಿಗೆ ಶುಲ್ಕ ರೂ. 6000.00ಗಳನ್ನು ಪಾವತಿ ಮಾಡಿಸಿಕೊಂಡು ರೆಸ್ಟೋರೆಂಟ್ ಬ್ರಾಂಡ್ಸ್ ಏಷಿಯಾ ಲಿಮಿಟೆಡ್ (ಬರ್ಗರ್‌ಕಿಂಗ್) ಕಟ್ಟಡವನ್ನು ಬಳದರೆ ಗೇಟ್, ಎನ್.ಹೆಚ್-75 ಉದಯಪುರ ಎಂದು ವಿಳಾಸ ನಮೂದಿಸಿ ಪರವಾನಿಗೆಯನ್ನು ನೀಡಿರುವುದು ದೃಢವಾಗಿರುತ್ತದೆ.

ಪ್ರಸ್ತಾಪಿತ ಜಮೀನಿನಲ್ಲಿ ಭೂ ಅನ್ಯಸಂಕ್ರಮಣ ಮಂಜೂರಾತಿ ಸಮಯದಲ್ಲಿ ವಿವಾದಿತ ಕಟ್ಟಡದ ಮಾಲೀಕರು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಹಾಸನ ರವರಿಗೆ ಸದರಿ ಜಮೀನಿನಲ್ಲಿ ಈ ಹಿಂದೆ ಕಾನೂನಿನ ಅರಿವಿಲ್ಲದೆ ರಸ್ತೆ ಮಾರ್ಜಿನ್ ಮತ್ತು ಕಟ್ಟಡ ರೇಖೆ ಒಳಗೆ ಕಟ್ಟಡ ನಿರ್ಮಾಣ ಮಾಡಿದ್ದು, ಪ್ರಸ್ತುತ ನಿಯಮಾವಳಿಗಳ ಉಲ್ಲಂಘನೆಯಾಗಿರುವ ಕಟ್ಟಡದ ಭಾಗವನ್ನು/ ಭಾಗವನ್ನು ತೆರವುಗೊಳಿಸಲು ಬದ್ಧನಿರುತ್ತೇನೆ ಹಾಗೂ ಉಳಿದ ಕಟ್ಟಡಕ್ಕೆ ಭೂಕಂದಾಯ ಅಧಿನಿಯಮದಂತೆ ನಿಗದಿತ ದಂಡ ಶುಲ್ಕವನ್ನು ಪಾವತಿಸಲು ಬದ್ಧನಿರುತ್ತೇನೆ ಎಂದು ನೋಟರಿಕೃತ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಾಗಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಹಾಸನ ರವರು ತಮ್ಮ ಕಛೇರಿ ಪತ್ರ ಸಂಖ್ಯೆ:ನಗ್ರಾಯೋಸನಿಹಾ:ಚರಾಪ:ವಿನ್ಯಾಸ:03:2023-24/255 ದಿನಾಂಕ:22.08.2023ರ ಪತ್ರದಲ್ಲಿ ಉಲ್ಲೇಖಿಸಿರುತ್ತಾರೆ.

ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಹಾಸನ ಜಿಲ್ಲೆ, ಹಾಸನ ರವರು ತಮ್ಮ ಕಛೇರಿಯ ಪತ್ರ ಸಂಖ್ಯೆ:ನಗ್ರಾಯೋಸನಿಹಾ:ಚರಾಪ:ವಿನ್ಯಾಸ:03:2023-24 ದಿನಾಂಕ:30.05.2023 ರಲ್ಲಿ ನೀಡಿರುವ ನಗರ ಯೋಜನೆಯ ತಾಂತ್ರಿಕ ಅನುಮೋದನೆಯ ಟಿಪ್ಪಣಿಯ ಕ್ರಮ ಸಂಖ್ಯೆ:22 ರಲ್ಲಿ ಪ್ರಸ್ತಾಪಿತ ಜಮೀನಿನಲ್ಲಿ ಈಗಾಗಲೇ ಭೂಪರಿವರ್ತನೆಗೆ ಮುಂಚಿತವಾಗಿ ನಿರ್ಮಿಸಿದ ಖಾಲಿ ಕಟ್ಟಡವಿದ್ದು, ರಸ್ತೆ ನಿಯಮಾವಳಿಯ ಅನ್ವಯ ರಸ್ತೆಯ ಮಾರ್ಜಿನ್ ಹಾಗೂ ಕಟ್ಟಡ ರೇಖೆ ಜಾಗದಲ್ಲಿ ಕಟ್ಟಡವಿದ್ದು, ರಸ್ತೆಯ ಮಾರ್ಜಿನ್ ಮತ್ತು ಕಟ್ಟಡ ರೇಖೆಯಲ್ಲಿ ನಿರ್ಮಾಣ ಮಾಡಿರುವ ಕಟ್ಟಡವನ್ನು ತೆರವುಗೊಳಿಸಲು ಸೂಚಿಸಿರುತ್ತಾರೆ.

ಈ ಎಲ್ಲಾ ನಡವಳಿಗಳೂ ಕೂಡ ನೀವು ನಿಮ್ಮ ಪಂಚಾಯಿತಿ ಕಾರ್ಯಾಲಯದಿಂದ ದಿನಾಂಕ:31.03.2023 ರಂದು ಶ್ರೀ ನವೀನ್ ಶಾಂತರಾಮಶೆಟ್ಟಿ ಬಿನ್ ಶಾಂತರಾಮಶೆಟ್ಟಿ ರವರ ಅರ್ಜಿ ದಿನಾಂಕ:30.12.2022ರ ಮೇರೆಗೆ ವಿವಾದಿತ ಬರ್ಗರ್‌ಕಿಂಗ್ ಕಟ್ಟಡ ನಿರ್ಮಾಣ ಮಾಡಲು ನಿಗದಿತ ಪರವಾನಿಗೆ ಶುಲ್ಕ ರೂ. 6000.00ಗಳನ್ನು ಪಾವತಿ ಮಾಡಿಸಿಕೊಂಡು ರೆಸ್ಟೋರೆಂಟ್ ಬ್ರಾಂಡ್ಸ್ ಏಷಿಯಾ ಲಿಮಿಟೆಡ್ (ಬರ್ಗರ್‌ಕಿಂಗ್) ಕಟ್ಟಡವನ್ನು ಬಳದರೆ ಗೇಟ್, ಎನ್.ಹೆಚ್-75 ಉದಯಪುರ ಎಂದು ವಿಳಾಸ ನಮೂದಿಸಿ ಪರವಾನಿಗೆಯನ್ನು ನೀಡಿದ ನಂತರ, ಅಂದರೆ ನೀವು ಸದರಿ ಜಾಗವು ಅನ್ಯಸಂಕ್ರಮಣವಾಗಿ ಭೂಪರಿವರ್ತನೆಯಾಗಿ ಏಕನಿವೇಶನ ನಕಾಶೆ ಅನುಮೋದನೆಯಾಗುವ ಮೊದಲೆ ಕಟ್ಟಡ ಪರವಾನಿಗೆ ನೀಡುವುದು ಕಂಡು ಬಂದಿರುತ್ತದೆ. ಇದು ಸ್ಪಷ್ಟವಾಗಿ ನಿಯಮಾವಳಿಗಳ ಉಲ್ಲಂಘನೆಯಾಗಿರುವುದು ಕಂಡು ಬಂದಿರುತ್ತದೆ ಹಾಗೂ ಲೋಕೋಪಯೋಗಿ ಇಲಾಖೆಯ ಜಿಲ್ಲಾಮುಖ್ಯ ರಸ್ತೆಯ ಬಾಜೂವಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ನೀಡುವ ಮೊದಲು ಲೋಕೋಪಯೋಗಿ ಇಲಾಖೆಯ ಹೆದ್ದಾರಿ ಪ್ರಾಧಿಕಾರದಿಂದ ನಿರಾಕ್ಷೇಪಣೆ ಪತ್ರವನ್ನು ಪಡೆಯದೆ ಪರವಾನಿಗೆಯನ್ನು ನೀಡಿ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಎಲ್ಲಾ ಬೆಳವಣಿಗೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಕಟ್ಟಡವನ್ನು ನಿರ್ಮಾಣ ಮಾಡಲು ಪರವಾನಿಗೆಯನ್ನು ನೀಡಿ, ಸದರಿ ದಾಖಲೆಗಳನ್ನು ಗೌಪ್ಯವಾಗಿ ಇಟ್ಟು ಪ್ರಕರಣವನ್ನು ಮುಚ್ಚಲು ಪ್ರಯತ್ನಿಸಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ನಿಯಮಾವಳಿಗಳ ರೀತ್ಯಾ ನಿಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡವು ಅಕ್ರಮವಾಗಿ ತಲೆ ಎತ್ತಿದ್ದಲ್ಲಿ ತೆರವುಗೊಳಿಸುವುದು ನಿಮ್ಮ ಆದ್ಯ ಕರ್ತವ್ಯ ಮತ್ತು ಜವಬ್ದಾರಿಯಾಗಿರುತ್ತದೆ ಎಂದು ಈ ಮೂಲಕ ನಿಮಗೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ
ಸಹಿ/-
ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ
ಚನ್ನರಾಯಪಟ್ಟಣ

1. ಪ್ರತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಪ್ರತಿಯನ್ನು ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಜಿಲ್ಲಾಪಂಚಾಯತಿ ಹಾಸನ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ
3. ಪ್ರತಿಯನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಪ್ರತಿಯನ್ನು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಹಾಸನ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಪ್ರತಿಯನ್ನು ಕಾರ್ಯ ನಿರ್ವಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚನ್ನರಾಯಪಟ್ಟಣ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಪ್ರತಿಯನ್ನು ಕಛೇರಿಯ ಕಡತಕ್ಕೆ

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ
ಚನ್ನರಾಯಪಟ್ಟಣ

O/C.

ಅನುಬಂಧ-೩ CLCB No 385

ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ
ಗೌರಿಕೊಪ್ಪಲು ... ಸಿದ್ದೇಶ್ವರ ದೇವಸ್ಥಾನದ ಹಿಂಭಾಗ
..., ಹಾಸನ-573 201
ದೂರವಾಣಿ ಸಂಖ್ಯೆ : 08172-268149

# ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಹಾಸನ.


ಗೌರಿ ಕೊಪ್ಪಲು, ಅರಳಿಕಟ್ಟೆ ಸರ್ಕಲ್, ಸಿದ್ದೇಶ್ವರ ದೇವಸ್ಥಾನದ ಹಿಂಭಾಗ, ಹಾಸನ-573201

ದೂರವಾಣಿ ಸಂಖ್ಯೆ:08172-268149

E-mail ID - adtphassan@hotmail.com


ಕ್ರ.ಸಂ.ನಗ್ರಾಯೋಸನಿಹಾಚರಾಪವಿನ್ಯಾಸ:03:2023-24 | 547 ದಿನಾಂಕ:6 -12-2023.

ಗೆ,

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಬಳದರೆ ಗ್ರಾಮ ಪಂಚಾಯಿತಿ,
ಚನ್ನರಾಯಪಟ್ಟಣ ತಾಲ್ಲೂಕು.

ಮಾನ್ಯರೇ,

ವಿಷಯ: ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಬಳದರೆ ಗ್ರಾಮದ ಸ.ನಂ.260ರಲ್ಲಿ ನಿರ್ಮಿಸಲಾದ ಬರ್ಗರ್ ಕಿಂಗ್ ಅಂಗಡಿ/ಇತರೆ ವಾಣಿಜ್ಯ ಮಳಿಗೆಯ ಬಗ್ಗೆ.

ಉಲ್ಲೇಖ:
1) ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ರವರ ಪತ್ರ ಸಂಖ್ಯೆ:ಎ.ಎಲ್.ಎನ್ (ಮಿಸ್)(ಚರಾಪ):08/2023-24, ದಿನಾಂಕ:18-05-2023.
2) ಡಾ//ಸೂರಜ್ ರೇವಣ್ಣ, ಮಾನ್ಯ ಶಾಸಕರು ಕರ್ನಾಟಕ ವಿಧಾನ ಪರಿಷತ್, ಹಾಸನ ರವರ ಪತ್ರ ಸಂಖ್ಯೆ:ಶಾ.ಕವಿಪಸ್ಥಸಂಕ್ಷೇಹಾ:06:2023-24, ದಿ:15-05-2023.
3) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ರವರ ಪತ್ರ ಸಂಖ್ಯೆ:ತಾ.ಪಂ/ಚರಾಪ/ಗ್ರಾ.ಪಂಬ/2023-24, ದಿ:30-05-2023.
4) ಈ ಕಛೇರಿಯ ಆದೇಶ ಸಂಖ್ಯೆ:ನಗ್ರಾಯೋಸನಿಹಾಚರಾಪವಿನ್ಯಾಸ:03:2023-24, ದಿನಾಂಕ:30-05-2023
5) ತಮ್ಮ ಕಛೇರಿ ಪತ್ರ ಸಂಖ್ಯೆ:ಗ್ರಾ.ಪಂ/ಬಳದರೆ/08/2023-24/255, ದಿ:05-06-2023.
6) ಈ ಕಛೇರಿಯ ಪತ್ರ ಸಂಖ್ಯೆ:ನಗ್ರಾಯೋಸನಿಹಾಚರಾಪವಿನ್ಯಾಸ:03:2023-24/255 ದಿನಾಂಕ:22-08-2023.
7) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ ಚನ್ನರಾಯಪಟ್ಟಣ ರವರ ಪತ್ರ ಸಂಖ್ಯೆ:ಸ.ಕಾ.ಇಂ/ನಂ.2,ಲೋ.ಇ.ಉ.ವಿ/ಚ.ರಾಪ/2023-24/1003, ದಿನಾಂಕ:23-11-2023.(ಸ್ವೀಕೃತಿ ದಿನಾಂಕ:05-12-2023.)
8) ಅರ್ಜಿದಾರರು ದಿನಾಂಕ:28-11-2022ರಂದು ಸಲ್ಲಿಸಿರುವ ಪ್ರಮಾಣ ಪತ್ರ/ಅಫಿಡವಿಟ್

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಮಾನ್ಯ ಶಾಸಕರ ಪತ್ರದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಬಳದರೆ ಗ್ರಾಮದ ಸ.ನಂ.260 ರಲ್ಲಿ ಸಂಬಂಧಪಟ್ಟ ಪ್ರಾಧಿಕಾರದ ಅನುಮತಿ ಪಡೆಯದೇ ಅಕ್ರಮ ಕಟ್ಟಡ ನಿರ್ಮಾಣ ಮಾಡಿ ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದು, ಇವರ ವಿರುದ್ಧ ಕ್ರಮ ಜರುಗಿಸುವಂತೆ ಹಾಗೂ ಸದರಿ ಪತ್ರದಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಕೂಡಲೇ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ವರದಿ ನೀಡುವಂತೆ ಉಲ್ಲೇಖ(1)ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ.

ಪರಿಶೀಲಿಸಿದಂತೆ, ಪ್ರಸ್ತಾವಿತ ಜಮೀನಿನಲ್ಲಿ ಈಗಾಗಲೇ ಭೂ ಪರಿವರ್ತನೆ ಮುಂಚಿತವಾಗಿ ನಿರ್ಮಿಸಿದ್ದ ಹಾಲಿ ಕಟ್ಟಡವಿದ್ದು, ಅರ್ಜಿದಾರರು ಭೂ ಅನ್ಯಕ್ರಾಂತ ಮಂಜೂರಾತಿ ಸಮಯದಲ್ಲಿ ಈ ಕಛೇರಿಗೆ ನೋಟರೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಿ ಸದರಿ ಜಮೀನಿನಲ್ಲಿ ಈ ಹಿಂದೆ ಕಾನೂನಿನ ಅರಿವಿಲ್ಲದೆ ರಸ್ತೆ ಮಾರ್ಜಿನ್ ಮತ್ತು ಕಟ್ಟಡ ರೇಖೆ ಒಳಗೆ ಕಟ್ಟಡ ನಿರ್ಮಾಣ ಮಾಡಿದ್ದು, ಪ್ರಸ್ತುತ ನಿಯಮಾವಳಿಗಳ ಉಲ್ಲಂಘನೆಯಾಗಿರುವ ಕಟ್ಟಡದ ಜಾಗವನ್ನು / ಭಾಗವನ್ನು ತೆರವುಗೊಳಿಸಲು ಬದ್ಧರಿರುತ್ತೇನೆ ಹಾಗೂ ಉಳಿದ ಕಟ್ಟಡಕ್ಕೆ ಭೂ ಕಂದಾಯ ಅಧಿನಿಯಮದಂತೆ ನಿಗದಿತ ದಂಡ ಶುಲ್ಕವನ್ನು ಪಾವತಿಸಲು ಬದ್ಧನಿರುತ್ತೇನೆ ಎಂದು ಅಫಿಡವಿಟ್ ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಆದೇಶ ಸಂಖ್ಯೆ:415547, ದಿನಾಂಕ:07-01-2023ರಲ್ಲಿ ಪ್ರಸ್ತಾವಿತ ಜಮೀನಿನ ಭೂ ಪರಿವರ್ತನೆ ಸಂದರ್ಭದಲ್ಲಿ ದಂಡ ಶುಲ್ಕವನ್ನು ಪಾವತಿಸಿಕೊಂಡಿರುವುದು ಕಂಡುಬಂದಿರುತ್ತದೆ.

The
force to

ರಿಟ್ ಪಿಟಿಷನ್ ಅರ್ಜಿ ಸಂಖ್ಯೆ:36314/2019ರ ಆದೇಶದಂ
ಮುಂದುವರೆದು ಘನ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ... ಸದರಿ ಜಮೀನಿನ ಪೂರ್ವ ದಿಕ್ಕಿನಲ್ಲಿರುವ ರಾಷ್ಟ್ರೀಯ
ಪರಿಶೀಲಿಸಲಾಗಿ, ಪ್ರಸ್ತಾವಿತ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡವು ಸದರಿ ಜಮೀನಿನ ಪೂರ್ವ ದಿಕ್ಕಿನಲ್ಲಿರುವ ರಾಷ್ಟ್ರೀಯ
ಹೆದ್ದಾರಿಯ ರಸ್ತೆ ಮಾರ್ಜಿನ್ ಮತ್ತು ಕಟ್ಟಡ ರೇಖೆ ಉಲ್ಲಂಘನೆಯಾಗಿರುವುದು ಕಂಡುಬಂದಿರುವುದಿಲ್ಲ.
ಆದರೆ ಪ್ರಸ್ತಾವಿತ ಜಮೀನಿನ ಉತ್ತರ ದಿಕ್ಕಿನಲ್ಲಿ ಜಿಲ್ಲಾ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ರಸ್ತೆ ಮಾರ್ಜಿನ್ ಮತ್ತು ಕಟ್ಟಡರೇಖೆ ಉಲ್ಲಂಘನೆಯಾಗಿರುವುದು ಕಂಡುಬರುತ್ತದೆ. ಆದ್ದರಿಂದ ಉಲ್ಲೇಖ(4)ರ ತಾಂತ್ರಿಕ ಅನುಮೋದನೆ ಆದೇಶದ ಷರತ್ತು ಸಂಖ್ಯೆ:22ರಂತೆ ಹಾಗೂ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993 ರ ಕಲಂ 64 ರಂತೆ ಕ್ರಮವಹಿಸಿ, ಕೈಗೊಂಡ ಕ್ರಮವನ್ನು ಮುಂದಿನ ಕ್ರಮವಹಿಸಲು ಅನುವಾಗುವಂತೆ ಈ ಕಛೇರಿಗೆ ಶೀಘ್ರವಾಗಿ ಸಲ್ಲಿಸಲು ಉಲ್ಲೇಖ(5)ರಲ್ಲಿ ತಮ್ಮ ಕಛೇರಿಗೆ ತಿಳಿಸಲಾಗಿತ್ತು.

ಉಲ್ಲೇಖ(5)ರಲ್ಲಿ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 64ರಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟಡಗಳ ನಿರ್ಮಾಣ ಮಾಡಬೇಕಾದರೆ ಇರುವ ನಿಯಮವಾಗಿರುತ್ತದೆ. ತಾವುಗಳು ಸೂಚಿಸಿರುವ ಸ.ನಂ.260ರ ಪಕ್ಕದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಾಗಿರುತ್ತದೆ. ಸದರಿ ರಸ್ತೆಗೆ ಸೇರಿದ ಒತ್ತುವರಿ ಕಟ್ಟಡ ಲೋಕೋಪಯೋಗಿ ಇಲಾಖೆಯವರೇ ತೆರವುಗೊಳಿಸಬೇಕಾಗಿರುತ್ತದೆ. ಆದ್ದರಿಂದ ತಾವುಗಳು ಈ ಸಂಬಂಧ .ಲೋಕೋಪಯೋಗಿ ಇಲಾಖೆಯವರೊಂದಿಗೆ ಪತ್ರ ವ್ಯವಹಾರ ನಡೆಸಬೇಕಾಗಿ ಕೋರಿರುವಂತೆ, ಉಲ್ಲೇಖ(6)ರ ಈ ಕಛೇರಿ ಪತ್ರದಲ್ಲಿ ಪ್ರಸ್ತಾವಿತ ಜಮೀನಿನ ಉತ್ತರ ದಿಕ್ಕಿನಲ್ಲಿ ಜಿಲ್ಲಾ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ರಸ್ತೆ ಮಾರ್ಜಿನ್ ಮತ್ತು ಕಟ್ಟಡರೇಖೆ ಉಲ್ಲಂಘನೆಯಾಗಿರುವುದು ಕಂಡುಬಂದಿರುತ್ತದೆ. ಸದರಿ ರಸ್ತೆಯು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಕಟ್ಟಡ ನಿಯಂತ್ರಣ ರೇಖೆಗಳನ್ನು ಗುರುತಿಸುವ ಸಕ್ಷಮ ಪ್ರಾಧಿಕಾರವಾಗಿರುವುದರಿಂದ ಕಾನೂನು ರೀತಿಯ ಕ್ರಮಕೈಗೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು, ಹೆದ್ದಾರಿ ಪ್ರಾಧಿಕಾರ ಮತ್ತು ಲೋ.ಬಂ.ಮತ್ತು ಒ.ಜ.ಇಲಾಖೆ, ಹಾಸನ ವಿಭಾಗ, ಹಾಸನ ರವರನ್ನು ಕೋರಲಾಗಿತ್ತು.

ಉಲ್ಲೇಖ(7)ರ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ ಚನ್ನರಾಯಪಟ್ಟಣ ರವರ ಪತ್ರದಲ್ಲಿ ಪಂಚಾಯತ್ ರಾಜ್ ಇಲಾಖೆಯ ನಿಯಮಾವಳಿಗಳ ರೀತ್ಯ ಪಂಚಾಯಿತಿ ವ್ಯಾಪ್ತಿಗೆ ಬರುವ ಯಾವುದೇ ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ಪರವಾನಗಿಯನ್ನು ನೀಡುವುದು, ಪರವಾನಗಿ ಪಡೆಯದೇ ಅಕ್ರಮ ಕಟ್ಟಡಗಳನ್ನು ನಿರ್ಮಿಸಿರುವುದು ಕಂಡುಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ತೆರವುಗೊಳಿಸುವುದು ಪಂಚಾಯಿತಿ/ಸ್ಥಳೀಯ ಸಂಸ್ಥೆಯ ಆದ್ಯ ಕರ್ತವ್ಯವಾಗಿರುತ್ತದೆ. ಕಾರಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಯಾವುದೇ ರೀತಿಯ ಕರ/ಕಂದಾಯಗಳನ್ನು ವಸೂಲಿ ಮಾಡುವುದು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದ್ದರಿಂದ ಬರ್ಗರ್ ಕಿಂಗ್ ಕಟ್ಟಡ ನಿರ್ಮಾಣ ಮಾಡಲು ಪರವಾನಗಿ ನೀಡಿಯು ಪಂಚಾಯಿತಿ ದೃಷ್ಟಿಯಲ್ಲಿ ಅಕ್ರಮ ಕಟ್ಟಡ ಎಂದು ಕಂಡುಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಕಟ್ಟಡವನ್ನು ತೆರವುಗೊಳಿಸುವುದು ಬಳದರೆ ಗ್ರಾಮ ಪಂಚಾಯಿತಿಯ ಜವಬ್ದಾರಿಯಾಗಿರುತ್ತದೆ. ಸದರಿ ರಸ್ತೆಯು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಕಟ್ಟಡವನ್ನು (ಒತ್ತುವರಿ) ತೆರವುಗೊಳಿಸುವುದು. ಕೂಡ ಪಂಚಾಯಿತಿ ರವರ ಜವಬ್ದಾರಿಯಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

ಮುಂದುವರೆದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2021ರ ಕಲಂ 4-K ರಡಿ ಅಭಿವೃದ್ಧಿ ಬೆಳವಣಿಗೆಗಳಿಗೆ ಅನುಮತಿ ನೀಡುವ ಕುರಿತಾಗಿ ಜರುಗಿಸಬೇಕಾದ ಕ್ರಮದ ಕುರಿತು ಉಪ ಕಲಂ (9) ರಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿರುತ್ತದೆ.

(9) wherever any development of land has been carried out,-

a) Without permission under this section, and

b) In contravention of any permission granted or any condition subject to which permission has been granted.

ಆ.ಖ.

(3)

The local authority shall exercise the power as under the relevant laws time being in force to intiate appropriate as action.

ಈ ಮೇಲ್ಕಂಡ ಅಂಶಗಳಂತೆ ಹಾಗೂ ಉಲ್ಲೇಖ(8)ರಲ್ಲಿ ಅರ್ಜಿದಾರರು ಸಲ್ಲಿಸಿರುವ ಪ್ರಮಾಣ ಪತ್ರ/ಅಫಿಡವಿಟ್ ರಂತೆ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಬಳದರೆ ಗ್ರಾಮದ ಸ.ನಂ.2(1)ರಲ್ಲಿ ನಿರ್ಮಿಸಲಾದ ಬರ್ಗರ್ ಕಿಂಗ್ ಅಂಗಡಿ/ಇತರೆ ವಾಣಿಜ್ಯ ಮಳಿಗೆಗಳು ಬಳದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವುದರಿಂದ ನಿಯಮಾವಳಿಗಳ ಉಲ್ಲಂಘನೆಯಾಗಿರುವ ಕಟ್ಟಡದ ಜಾಗವನ್ನು/ಭಾಗವನ್ನು ತೆರವುಗೊಳಿಸಲು ತಮ್ಮ ಗ್ರಾಮ ಪಂಚಾಯಿತಿಯ ಕಾರ್ಯವ್ಯಾಪ್ತಿಯಲ್ಲಿ ಕಾನೂನು ರೀತಿಯ ಕ್ರಮಕ್ಕೆಗೊಳ್ಳುವಂತೆ ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/-
ಸಹಾಯಕ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ
ಹಾಸನ.

ಪ್ರತಿಯನ್ನು:

1. ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನ ರವರ ಮಾಹಿತಿಗಾಗಿ ಕಳುಹಿಸಲಾಗಿದೆ .
3. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚನ್ನರಾಯಪಟ್ಟಣ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ ಚನ್ನರಾಯಪಟ್ಟಣ ರವರಿಗೆ ಕಳುಹಿಸಲಾಗಿದೆ.
5. ಕಛೇರಿ ಪ್ರತಿ.

6.12.20
ಸಹಾಯಕ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ
ಹಾಸನ.

Scanned with OKEN Scanner

3

(2)

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ,
ಚನ್ನರಾಯಪಟ್ಟಣ -573116

ಅನುಬಂಧ-3
(LCON-335)

Tell #: 08176-252224
Email ID:pwdaee2crp@gmail.com

ಕ್ರ.ಸಂ/ಸ.ಕಾ.ಇಂ/ನಂ.2,ಲೋ.ಇ.ಉ.ವಿ/ಚ.ರಾ.ಪ/2023-24/ 1003 ದಿನಾಂಕ:- 23-11-2023

ರವರಿಗೆ

ಸಹಾಯಕ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,
ಗೌರಿಕೊಪ್ಪಲು ಮುಖ್ಯರಸ್ತೆ,
ಸಿದ್ದೇಶ್ವರ ದೇವಸ್ಥಾನ ಹಿಂಭಾಗ, ವಿದ್ಯಾನಗರ,
ಹಾಸನ-573201.

ಮಾನ್ಯರೇ,

ವಿಷಯ:- ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ಬಳದರೆ ಗ್ರಾಮದ ಸ.ನಂ.260ರಲ್ಲಿ ನಿರ್ಮಿಸಲಾದ ಬರ್ಗರ್ ಕಿಂಗ್ ಅಂಗಡಿ/ಇತರೆ ವಾಣಿಜ್ಯ ಮಳಿಗೆಯ ಬಗ್ಗೆ

ಉಲ್ಲೇಖ:-1)ತಮ್ಮ ಕಛೇರಿ ಪತ್ರ ಸಂಖ್ಯೆ:ನಗ್ರಾಯೋಸನಿಹಾ:ಚರಾಪ:ವಿನ್ಯಾಸ:03:2023-24/255 ದಿನಾಂಕ:-22.08.2023
2)ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ರವರ ಕಛೇರಿ ಪತ್ರ ಸಂಖ್ಯೆ:ಕಾಇಂ:ಲೋ.ಇ.ಹಾವಿ:ಹಾ:ರಶಾ:2023-24/1951 ದಿನಾಂಕ:-29.09.2023

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ಬಳದರೆ ಗ್ರಾಮದ ಸ.ನಂ. 260ರಲ್ಲಿ 0-2 ಎಕರೆ 20 ಗುಂಟೆ ವಿಸ್ತೀರ್ಣ ಪ್ರದೇಶದ ವಾಣಿಜ್ಯ (ಹೋಟೇಲ್) ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯನ್ನು ತಯಾರಿಸಿ ಅನುಮೋದನೆ ನೀಡಿರುತ್ತೀರಿ.

ಆದರೆ ವಿಷಯದಲ್ಲಿ ಪ್ರಸ್ತಾಪಿತ ಜಮೀನು ಉತ್ತರ ದಿಕ್ಕಿನಲ್ಲಿ ಜಿಲ್ಲಾಮುಖ್ಯ ರಸ್ತೆಗೆ ಹೊಂದಿಕೊಂಡಂತೆ ರಸ್ತೆಯ ಮಾರ್ಜಿನ್ ಮತ್ತು ಕಟ್ಟಡ ರೇಖೆ ಉಲ್ಲಂಘನೆಯಾಗಿರುವುದು ಕಂಡು ಬಂದಿದ್ದು, ಸದರಿ ರಸ್ತೆಯು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ, ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿರುವ ರಾಜ್ಯಹೆದ್ದಾರಿ ಮತ್ತು ಜಿಲ್ಲಾಮುಖ್ಯ ರಸ್ತೆಗಳ ಇಕ್ಕೆಲಗಳಲ್ಲಿ ಕಟ್ಟಡ ನಿಯಂತ್ರಣಾ ರೇಖೆಗಳನ್ನು ಗುರುತಿಸುವ ಸಕ್ಷಮ ಪ್ರಾಧಿಕಾರವಾಗಿರುವುದರಿಂದ, ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ಕೋರಲಾಗಿದೆ ಎಂದು ಉಲ್ಲೇಖ (1)ರ ಅನ್ವಯ ಮನವಿ ಮಾಡಿಕೊಂಡಿರುತ್ತೀರಿ. ಅದರಂತೆ ಉಲ್ಲೇಖ (2)ರ ಪತ್ರದಲ್ಲಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ರವರು ಸದರಿ ವಿಷಯದ ಸಂಬಂಧ ಪರಿಶೀಲಿಸಿ ಕ್ರಮ ಕೈಗೊಂಡು ವರದಿ ನೀಡಲು ಸೂಚಿಸಿರುತ್ತಾರೆ.

ಆದರೆ ವಾಸ್ತವವಾಗಿ ಲೋಕೋಪಯೋಗಿ ಇಲಾಖೆ, ಹೆದ್ದಾರಿ ಪ್ರಾಧಿಕಾರದ ನಿಯಮಾವಳಿಗಳ ರೀತ್ಯಾ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಸೇರಿದ ಯಾವುದೇ ರಾಜ್ಯಹೆದ್ದಾರಿ/ ಜಿಲ್ಲಾಮುಖ್ಯ ರಸ್ತೆಗಳ ಇಕ್ಕೆಲಗಳಲ್ಲಿ ವಸತಿ ಬಡಾವಣೆ/ ವಾಣಿಜ್ಯ ಉದ್ದೇಶಗಳಿಗಾಗಿ ನಕಾಶೆಗಳನ್ನು ತಯಾರಿಸಿ ಅನುಮೋದನೆ ನೀಡುವ ಮೊದಲು ಸಂಬಂಧಿಸಿದ ಲೋಕೋಪಯೋಗಿ ಇಲಾಖಾ ಕಛೇರಿಯಿಂದ ನಿರಾಕ್ಷೇಪಣಾ ಪತ್ರವನ್ನು ನಿಯಮಾನುಸಾರ ಕಡ್ಡಾಯವಾಗಿ ಪಡೆಯುವುದು ಎಲ್ಲಾ ಇಲಾಖೆಗೂ ತಿಳಿದ ವಿಷಯವಾಗಿರುತ್ತದೆ.

ನೀವು ವಾಣಿಜ್ಯ (ಹೋಟೇಲ್) ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯನ್ನು ತಯಾರಿಸಿ ಅನುಮೋದನೆ ನೀಡುವ ಮೊದಲು ನಮ್ಮ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯದೆ ಅನುಮೋದನೆ ನೀಡಿದ ನಂತರ, ಸದರಿ ರಸ್ತೆಯು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ, ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿರುವ ರಾಜ್ಯಹೆದ್ದಾರಿ ಮತ್ತು ಜಿಲ್ಲಾಮುಖ್ಯ ರಸ್ತೆಗಳ ಇಕ್ಕೆಲಗಳಲ್ಲಿ ಕಟ್ಟಡ ನಿಯಂತ್ರಣಾ ರೇಖೆಗಳನ್ನು ಗುರುತಿಸುವ ಸಕ್ಷಮ ಪ್ರಾಧಿಕಾರವಾಗಿರುವುದರಿಂದ, ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತೀರಿ.

ಮುಂದುವರೆದು ಈ ಕಛೇರಿಯಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಬಳದರೆ, ಚನ್ನರಾಯಪಟ್ಟಣ ರವರ ಕಾರ್ಯಾಲಯದಿಂದ ದಿನಾಂಕ:31.03.2023 ರಂದು ಶ್ರೀ ನವೀನ್ ಶಾಂತರಾಮಶೆಟ್ಟಿ ಬಿನ್ ಶಾಂತರಾಮಶೆಟ್ಟಿ ರವರ ಅರ್ಜಿ ದಿನಾಂಕ:30.12.2022ರ ಮೇರೆಗೆ ವಿವಾದಿತ ಬರ್ಗರ್‌ಕಿಂಗ್ ಕಟ್ಟಡ ನಿರ್ಮಾಣ ಮಾಡಲು ನಿಗದಿತ ಪರವಾನಿಗೆ ಶುಲ್ಕ ರೂ. 6000.00ಗಳನ್ನು ಪಾವತಿ ಮಾಡಿಸಿಕೊಂಡು ರೆಸ್ಟೋರೆಂಟ್ ಬ್ರಾಂಡ್ಸ್ ಏಷಿಯಾ ಲಿಮಿಟೆಡ್ (ಬರ್ಗರ್‌ಕಿಂಗ್) ಕಟ್ಟಡವನ್ನು ಬಳದರೆ ಗೇಟ್, ಎನ್.ಹೆಚ್-75 ಉದಯಪುರ ಎಂದು ವಿಳಾಸ ನಮೂದಿಸಿ ಪರವಾನಿಗೆಯನ್ನು ನೀಡಿರುವುದು ದೃಢವಾಗಿರುತ್ತದೆ. ಇದು ಲೋಕೋಪಯೋಗಿ ಹೆದ್ದಾರಿ ಪ್ರಾಧಿಕಾರದ ನಿಯಮಾವಳಿಗಳ ರೀತ್ಯಾ ನಿಯಮಗಳ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಕಾರಣ ಗ್ರಾಮ ಪಂಚಾಯಿತಿ /ಸ್ಥಳೀಯ ಸಂಸ್ಥೆಗಳು ಲೋಕೋಪಯೋಗಿ ಇಲಾಖೆಗೆ ಸೇರಿದ ರಾಜ್ಯಹೆದ್ದಾರಿ/ಜಿಲ್ಲಾಮುಖ್ಯ ರಸ್ತೆಗಳ ಬಾಜುವಿನಲ್ಲಿ ಕಟ್ಟಡ ಪರವಾನಿಗೆ ನೀಡುವಾಗ ಲೋಕೋಪಯೋಗಿ ಇಲಾಖೆ ಹೆದ್ದಾರಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದು ಹೆದ್ದಾರಿ ನಿಯಮಾವಳಿಗಳ ರೀತ್ಯಾ ಕಡ್ಡಾಯವಾಗಿರುತ್ತದೆ. ಆದರೆ ಇಲ್ಲಿ ರಾಜ್ಯಹೆದ್ದಾರಿ ಮತ್ತು ಜಿಲ್ಲಾಮುಖ್ಯ ರಸ್ತೆಗಳ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಪರವಾನಿಗೆ ನೀಡಿರುತ್ತಾರೆ. ಈ ಸಂಬಂಧ ಕಟ್ಟಡಕ್ಕೆ ಪರವಾನಗಿ ನೀಡಿರುವ ಬಗ್ಗೆ ಮಾಹಿತಿಯನ್ನು ಕೋರಿ ಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ಪತ್ರ ವ್ಯವಹಾರಿಸಲಾಗಿ, ಸದರಿಯವರು ಮೇಲಿನ ಕಟ್ಟಡ ಸಂಬಂಧ ಈ ಕಛೇರಿಯಿಂದ ಯಾವುದೇ ಪರವಾನಿಗೆ ನೀಡಿರುವುದಿಲ್ಲವೆಂದಾಗಿ ಹಿಂಬರಹ ನೀಡಿರುತ್ತಾರೆ.

ಪಂಚಾಯತ್‌ರಾಜ್ ಇಲಾಖೆಯ ನಿಯಮಾವಳಿಗಳ ರೀತ್ಯಾ ಪಂಚಾಯಿತಿ ವ್ಯಾಪ್ತಿಗೆ ಬರುವ ಯಾವುದೇ ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ಪರವಾನಿಗೆಯನ್ನು ನೀಡುವುದು, ಪರವಾನಿಗೆ ಪಡೆಯದೆ ಅಕ್ರಮ ಕಟ್ಟಡಗಳನ್ನು ನಿರ್ಮಿಸಿರುವುದು ಕಂಡು ಬಂದಲ್ಲಿ ಸೂಕ್ತಕ್ರಮ ತೆಗೆದುಕೊಂಡು ತೆರವುಗೊಳಿಸುವುದು ಪಂಚಾಯಿತಿ /ಸ್ಥಳೀಯ ಸಂಸ್ಥೆಗಳ ಆದ್ಯ ಕರ್ತವ್ಯವಾಗಿರುತ್ತದೆ. ಕಾರಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಯಾವುದೇ ರೀತಿಯ ಕರ /ಕಂದಾಯಗಳನ್ನು ವಸೂಲಿ ಮಾಡುವುದು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದ್ದರಿಂದ ಬರ್ಗರ್‌ಕಿಂಗ್ ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ನೀಡಿಯೂ ಪಂಚಾಯಿತಿ ದೃಷ್ಟಿಯಲ್ಲಿ ಅಕ್ರಮ ಕಟ್ಟಡ ಎಂದು ಕಂಡು ಬಂದಲ್ಲಿ, ಸೂಕ್ತಕ್ರಮ ತೆಗೆದುಕೊಂಡು ಕಟ್ಟಡವನ್ನು ತೆರವುಗೊಳಿಸುವುದು ಬಳದರೆ ಗ್ರಾಮ ಪಂಚಾಯಿತಿಯ ಜವಾಬ್ದಾರಿಯಾಗಿರುತ್ತದೆ. ಸದರಿ ರಸ್ತೆಯು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, ತಾವು ಕೋರಿರುವ ಕಟ್ಟಡವನ್ನು (ಒತ್ತುವರಿ ಮುಕ್ತ) ತೆರವುಗೊಳಿಸುವುದು ಕೂಡ ಪಂಚಾಯಿತಿಯವರ ಜವಾಬ್ದಾರಿಯಾಗಿರುತ್ತದೆ ಎಂಬುದನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ಮುಂದುವರೆದು ವಾಣಿಜ್ಯ (ಹೋಟೇಲ್) ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯನ್ನು ತಯಾರಿಸಿ ಅನುಮೋದನೆ ನೀಡುವ ಮೊದಲು ಲೋಕೋಪಯೋಗಿ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯದೆ ನೀವು ತಾಂತ್ರಿಕ ಅನುಮೋದನೆ ನೀಡಿರುವುದರಿಂದ, ಸದರಿ ಕಟ್ಟಡವನ್ನು ತೆರವುಗೊಳಿಸುವ ಸಂಬಂಧ ತಮ್ಮ ಉಪ ಸ್ಥಿತಿಯಲ್ಲಿಯೇ ಸೂಕ್ತಕ್ರಮ ಕೈಗೊಂಡು ಒತ್ತುವರಿ ಮುಕ್ತ ರಸ್ತೆಯನ್ನಾಗಿರಿಸಿಕೊಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ
ಸಹಿ/-
ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ
ಚನ್ನರಾಯಪಟ್ಟಣ

1. ಪ್ರತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತಿ ಹಾಸನ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ
2. ಪ್ರತಿಯನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ
3. ಪ್ರತಿಯನ್ನು ತಹಶೀಲ್ದಾರ್ ರವರು, ತಾಲ್ಲೋಕು ಕಛೇರಿ, ಚನ್ನರಾಯಪಟ್ಟಣ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ
4. ಪ್ರತಿಯನ್ನು ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೋಕು ಪಂಚಾಯಿತಿ, ಚನ್ನರಾಯಪಟ್ಟಣ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಪ್ರತಿಯನ್ನು ಕಛೇರಿಯ ಕಡತಕ್ಕೆ

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ನಂ.2, ಉಪವಿಭಾಗ
ಚನ್ನರಾಯಪಟ್ಟಣ